**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 04.06.2021.

## 1] ಆಲಮೇಲ ಪೊಲೀಸ ಠಾಣೆ ಗುನ್ನೆ ನಂ: 64/2021 ಕಲಂ: 279, 304 [ಎ] ಐ.ಪಿ.ಸಿ.

ದಿನಾಂಕ 03.06.2021 ರಂದು 21.30 ಗಂಟೆಗೆ. ಇದರಲ್ಲಿಯ ಪಿರ್ಯಾದಿ ಮಹಾನಂದ ಗಂಡ ಮಾಲಾಸಾಬ @ ಮಾಳು ಜಮಾದಾರ, ವಯಾ 30 ವರ್ಷ, ಜ್ಯಾತಿ ಹಿಂದೂ ತಳವಾರ', ಉದ್ಯೋಗ ಕೂಲಿ ಕೆಲಸ ಸಾ: ಬ್ಯಾಡಗಿಹಾಳ ತಾ: ಸಿಂದಗಿ. ಇವರು ಠಾಣೆಗೆ ಹಾಜರಾಗಿ ಗಣಕೀಕೃತ ಪಿರ್ಯಾದಿ ಕೊಟ್ಟಿದ್ದರಲ್ಲಿಯ ವಿವರ. ಮೃತ ಪಿರ್ಯಾದಿಯ ಗಂಡನಾದ ಮಾಲಾಸಾಬ @ ಮಾಳು ತಂದೆ ಶರಣಪ್ಪ ಜಮಾದಾರ, ವಯಾ 35 ವರ್ಷ, ಸಾ: ಬ್ಯಾಡಗಿಹಾಳ ಇತನು ತಾನು ನಡೆಸುತ್ತಿದ್ದ ಹೀರೊ ಕಂಪನಿಯ ಪ್ಯಾಶನ ಪ್ರೋ ಮೋಟರ್ ಸೈಕಲ್ ನಂ. ಕೆಎ-32/-ಇಬಿ-7544 ನೇದ್ದನ್ನು ಮಡ್ನಳ್ಳಿ ಗ್ರಾಮದ ಕಡೆಯಿಂದ ಬ್ಯಾಡಗಿಹಾಳ ಕಡೆಗೆ ಅತೀ ಜೋರಾಗಿ ಮತ್ತು ನಿರ್ಲಕ್ಷತನದಿಂದ ನಡೆಯಿಸಿಕೊಂಡು ಬರುವಾಗ ಮಡ್ನಳ್ಳಿ ಗ್ರಾಮದ ಹತ್ತಿರ ಖಾಜೇಸಾಬ ತಂದೆ ಸೈಪನಸಾಬ ಬಮ್ಮನಹಳ್ಳಿ ಸಾ: ಮಡ್ನಳ್ಳಿ ಇವರ ತೋಟದ ಹತ್ತಿರ ರೋಡಿನ ಪಶ್ಚಿಮದ ಬದಿಗೆ ತಿಪ್ಪೆಯ ಮೇಲೆ ನಿಲ್ಲಿಸಿದ್ದ ಎತ್ತಿನ ಗಾಡಿಗೆ ಹಿಂದೆ ತನ್ನ ಮೋಟರ ಸೈಕಲ್ ಡಿಕ್ಕಿ ಹೊಡೆಯಿಸಿ ಅಘಘಾತ ಪಡಿಸಿದ್ದು, ನನ್ನ ಗಂಡನಿಗೆ ಮುಖದ ಬಲಗಡೆ ಕಣ್ಣಿಗೆ ಮತ್ತು ಮೆಲಕಿಗೆ ಭಾರಿ ಗಾಯವಾಗಿ ರಕ್ತಸ್ರಾವವಾಗಿ ಸ್ಥಳದಲ್ಲಿಯೇ ಸತ್ತಿರುತ್ತಾನೆ. ಈ ಬಗ್ಗೆ ಸ:ತ: ಶ್ರೀ ಸುರೇಶ ಆರ್ ಗಡ್ಡಿ ಪಿಎಸ್ಐ ಆಲಮೇಲ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ,

## 2] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 151/2021 ಕಲಂ: 279, 338, 304(೦) IPC

ದಿನಾಂಕ 03/06/2021 ರಂದು 14.00ರ ಸುಮಾರಿಗೆ ಇದರಲ್ಲಿ ನಮೂದ ಮಾಡಿದ ಪಿಕ್ ಅಪ್ ವಾಹನ ನಂ ಕೆ.ಎ-28/ಎಂ.ಎ-4266 ನೇದರ ಆರೋಪಿ ಚಾಲಕನು ತಾನು ನಡೆಯಿಸುತ್ತಿದ್ದ ಪಿಕ್ಅಪ್ ವಾಹನವನ್ನು ವಿಜಯಪುರ ಕಡೆಯಿಂದ ತಿಡಗುಂದಿ ಕಡೆಗೆ ಅತೀ ಜೋರಾಗಿ ಮತ್ತು ನಿರ್ಲಕ್ಷತನದಿಂದ ನಡೆಯಿಸಿಕೊಂಡು ಹೋಗಿ ವಿಜಯಪುರ-ತಿಡಗುಂದಿ ರಸ್ತೆಯ ಎ.ಆರ್.ಜೆ. ಶಾಲೆಯ ಹತ್ತಿರ ತನ್ನ ಮುಂದೆ ಇದರಲ್ಲಿಯ ಫಿರ್ಯಾದಿಯ ತಂದೆ ಶೇಕಪ್ಪ ಚನ್ನಪ್ಪ ತೊರವಿ ವಯಾ 48 ವರ್ಷ ಸಾ: ಡೊಮನಾಳ ಈತನು ತನ್ನ ಮೊಟಾರ್ ಸೈಕಲ್ ನಂ ಕೆ.ಎ೦-3/ಎಚ್,ಬಿ-8143 ನೇದರ ಮೇಲೆ ತನ್ನ ಹೆಂಡತಿ ರೇಣುಕಾ ಗಂಡ ಶೇಕಪ್ಪ ತೊರವಿ ವಯಾ 40 ವರ್ಷ ಇವಳಿಗೆ ಕೂಡ್ರಿಸಿಕೊಂಡು ಹೊರಟದ್ದ ಮೊಟಾರ್ ಸೈಕಲಕ್ಕೆ ಓವರ್ ಟೇಕ್ ಮಾಡಲು ಹೋಗಿ, ಹಿಂದಿನಿಂದ ಹಾಯಿಸಿ ಅಪಘಾತಪಡಿಸಿ, ಫಿರ್ಯಾದಿಯ ತಾಯಿಯ ತಲೆಗೆ, ಮುಖಕ್ಕೆ ಮೈಕೈಗೆ, ಭಾರಿಗಾಯ ಪೆಟ್ಟುಪಡಿಸಿ ಸ್ಥಳದಲ್ಲಿಯೇ ಮರಣ ಹೊಂದುವಂತೆ ಮಾಡಿದ್ದಲ್ಲದೇ ಫಿರ್ಯಾದಿಯ ತಂದೆಯ ತಲೆಗೆ, ಮುಖಕ್ಕೆ, ಮೈಕೈಗೆ ಭಾರಿಗಾಯ ಪೆಟ್ಟುಪಡಿಸಿದ್ದು ಇರುತ್ತದೆ ಅಂತಾ ವಗೈರೆ ಫಿರ್ಯಾದದಲ್ಲಿ ನಮೂದ ಇರುತ್ತದೆ.

## 3] ಜಲನಗರ ಪೊಲೀಸ ಠಾಣೆ ಗುನ್ನಾ,ನಂ : 28/2021 ಕಲಂ: 188, 269, 271 ಐಪಿಸಿ

ದಿನಾಂಕ : 03-06-2021 ರಂದು ಮದ್ಯಾಹ್ನ 01-00 ಫಿರ್ಯಾದಿ ಶ್ರೀ ನಜೀರ ತಂದೆ ಲಾಲಸಾಬ ಮುಲ್ಲಾ ವಯಾ-27 ಸಾ॥ ವಿಜಯಪುರ ಮಹಾನಗರ ಪಾಲಿಕೆ..ರವರು ಇದರಲ್ಲಿಯ ಫಿರ್ಯಾದಿದಾರರು ಈ ದಿವಸ ದಿನಾಂಕ: 03/06/2021 ರಂದು ಠಾಣೆಗೆ ಬಂದು ಫಿರ್ಯಾದಿ ಸಲ್ಲಿಸಿದ್ದು ಅದರ ವಿವರ-ಮಾನ್ಯ ಕರ್ನಾಟಕ ರಾಜ್ಯ ಸರ್ಕಾರ ಇವರು ಕೋರೋನಾ ವೈರಸ್/ಕೊವಿಡ್ -19 [ಎರಡನೇಯ ಅಲೆ] ಪ್ರಕರಣಗಳು ಸಾಂಕ್ರಾಮಿಕವಾಗಿ ಹರಡದಂತೆ ತಡೆಗಟ್ಟುವ ಮತ್ತು ಅಪಾಯಕಾರಿ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮತ್ತು ಸಾರ್ವಜನಿಕರ ಹಿತದೃಷ್ಟಿಯನ್ನು ಕಾಯ್ದುಕೊಳ್ಳಲು ಮುಂಜಾಗೃತ ಕ್ರಮವಾಗಿ ಸಾರ್ವಜನಿಕ ಸಭೆ , ಸಮಾರಂಭ , ಮದುವೆ, ಚಲನಚಿತ್ರ ಪ್ರದರ್ಶನ , ವಸ್ತು ಪ್ರದರ್ಶನ ಇತ್ಯಾದಿ ಸಾರ್ವಜನಿಕರು ಹೆಚ್ಚಾಗಿ ಸೇರುವ ಎಲ್ಲಾ ಚಟುವಟಿಕೆಗಳನ್ನು ನಿಷೇಧಿಸಿ ಆದೇಶವನ್ನು ಹೊರಡಿಸಿರುತ್ತಾರೆ. ಮತ್ತು ವಾಣಿಜ್ಯ ಮತ್ತು ಖಾಸಗಿ ಸಂಸ್ಥೆಗಳಾದ ನ್ಯಾಯ ಬೆಲೆ ಅಂಗಡಿಗಳು ಕಿರಾಣಿ ಅಂಗಡಿ, ಬೇಕರಿಗಳು, ದಿನಸಿ ಹಣ್ಣು ಮತ್ತು ತರಕಾರಿ ,ಹಾಲಿನ ಡೈರಿ ಮಾಂಸ,ಮೀನು ಮತ್ತು ಪಶು ಆಹಾರದ ಅಂಗಡಿಗಳಿಗೆ ಅನುಮತಿಯನ್ನು ದಿನಾಂಕ:-03/06/2021 ರಂದು ಮುಂಜಾನೆ 10-00 ಗಂಟೆಯವರೆಗೆ ಮಾತ್ರ ಅನುಮತಿ ನೀಡಿದ್ದು ಅಲ್ಲದೇ 02/06/2021 ರ ಮುಂಜಾನೆ 10 ಗಂಟೆಯ ನಂತರ ಮೇಲೆ ಹೇಳಿದ ಎಲ್ಲಾ ಅಂಗಡಿಗಳನ್ನು ಮುಚ್ಚತಕ್ಕದ್ದು ಅಂತಾ ಕರ್ನಾಟಕ ಸರಕಾರದ ಆದೇಶ ಇರುತ್ತದೆ. ಸದರಿ ಸರಕಾರದ ಆದೇಶ ಇರುವದರಿಂದ ಕರೋನಾ ಸಾಂಕ್ರಾಮಿಕ ರೋಗ ಹರಡದಂತೆ ವಿಜಯಪುರ ಶಹರದ ಜನರಿಗೆ ಅನಾವಶ್ಯಕವಾಗಿ ಓಡಾಡದಂತೆ ತಿಳುವಳಿಕೆ ಹೇಳಿ ಸೂಚಿಸಿದ್ದು ಇರುತ್ತದೆ. ಅದರಂತೆ ಈ ದಿವಸ ದಿನಾಂಕ: 03/06/2021 ರಂದು ಮದ್ಯಾಹ್ನ 12-00 ಗಂಟೆಯ ಸುಮಾರಿಗೆ ಕೋರೋನಾ ವೈರಸ್/ಕೊವಿಡ್ -19 [ಎರಡನೇಯ ಅಲೆ] ಬಂದೋಬಸ್ತಿ ಕರ್ತವ್ಯದ ಮೇಲೆ ನಾನು ಮತ್ತು ನಮ್ಮ ಠಾಣೆಯ ಶ್ರೀ ಬಿ.ಎಸ್.ಬಿರಾದಾರ ಸಿ.ಹೆಚ್.ಸಿ-1104, ಶ್ರೀ ಎಮ್ ಕೆ ಹಾವಡಿ ಸಿಪಿಸಿ- 1622 ಕೂಡಿಕೊಂಡು ವಿಜಯಪೂರ ಶಹರದ ವಿಶ್ವಶ್ವೇರಯ್ಯ ಸರ್ಕಲದಲ್ಲಿಂದ ವಜ್ರಹನುಮಾನ ರೈಲ್ವೆ ಗೇಟ ಹತ್ತಿರ ಪೆಟ್ರೋಲಿಂಗ ಮಾಡುತ್ತಾ ಹೋದಾಗ ಅಲ್ಲಿ ಒಬ್ಬ ಎಸ್ ಎಲ್ ಜಿ ಅಯ್ಯಂಗಾರ ಬೇಕರಿ ತಗೆದು ಅನಾವಶ್ಯಕವಾಗಿ ಜನರನ್ನು ಸೇರಿಸಿಕೊಂಡು ವ್ಯಾಪಾರ ಮಾಡುತ್ತಾ ಇದ್ದನು. ನಾವು ಅವನ ಹತ್ತಿರ ಹೋದಾಗ ಅಲ್ಲಿ ನಿಂತಿದ್ದ ಜನರು ನಮ್ಮನ್ನು ನೋಡಿ ಹೋಗಿದ್ದು ಬೇಕರಿ ವ್ಯಾಪರ ಮಾಡುತ್ತಿದ್ದವನು ನಮ್ಮ ಕೈಗೆ ಸಿಕ್ಕಿದ್ದು ನಾವು ಅವನಿಗೆ ಕರೋನಾ ವೈರಸ್ ಸಾಂಕ್ರಾಮಿಕ ರೋಗ ಹರಡದಂತೆ ಸರ್ಕಾರವು ಆದೇಶ ನೀಡಿದ್ದರು ನೀನು ಏಕೆ ಬೇಕರಿನ ಅಂಗಡಿ ತೆಗೆದು ಅನಾವಶ್ಯಕವಾಗಿ ಜನರನ್ನು ಸೇರಿಸಿಕೊಂಡು ವ್ಯಾಪಾರ ಮಾಡುತ್ತಿರುವಿ ಅಂತಾ ವಿಚಾರಿಸಿದಾಗ ಅವನು ಯಾವುದೇ ಸಮರ್ಪಕ ಉತ್ತರ ನೀಡಲಿಲ್ಲಾ. ಸದರಿ ಅವನಿಗೆ ಹೆಸರು ವಿಳಾಸ ಕೇಳಲಾಗಿ ಅವನು ತನ್ನ ಹೆಸರು ಶಿವಪ್ರಸಾದ ತಂದೆ ಈಶ್ವರಪ್ಪ ಗೌಡ ವಯಾ-39 ವರ್ಷ, ಉದ್ಯೋಗ: ಬೇಕರಿ ಅಂಗಡಿ ವ್ಯಾಪಾರ, ಜಾತಿ-ಹಿಂದೂ-ಒಕ್ಕಲಿಗ ಸಾ॥ ಗದ್ದವಳ್ಳಿ ಜಿ॥ತಾ॥ ಹಾಸನ ಹಾಲಿ:ವ: ವಜ್ರಹನುಮಾನ ನಗರ ವಿಜಯಪುರ ಅಂತಾ ಹೇಳಿದನು.

ಕಾರಣ ಪಿ.ಎಸ್.ಐ [ ಕಾ&ಸು] ಜಲನಗರ ಪೊಲೀಸ್ ಠಾಣೆ ರವವರ ವರದಿ ಪರಿಶೀಲಿಸಲಾಗಿ ಕರ್ನಾಟಕ ರಾಜ್ಯ ಸರ್ಕಾರದ ಸಾಂಕ್ರಾಮಿಕ ರೋಗ ನಿರ್ವಹಣಾ ಕಾಯ್ದೇ ಆದೇಶವನ್ನು ಉಲ್ಲಂಘನೆ ಮಾಡಿರುವುದು ಸ್ಪಷ್ಟವಾಗಿ ತಿಳಿದು ಬಂದಿರುವುದರಿಂದ ಕಾರಣ ಈ ಕೆಳಗೆ ನಮೂದಿಸಿದ ಆರೋಪಿತನಾದ-ಶಿವಪ್ರಸಾದ ತಂದೆ ಈಶ್ವರಪ್ಪ ಗೌಡ ಸಾ॥ ಗದ್ದವಳ್ಳಿ ಜಿ॥ತಾ॥ ಹಾಸನ ಹಾಲಿ:ವ: ವಜ್ರಹನುಮಾನ ನಗರ ವಿಜಯಪುರ ಈತನು ಮಾನ್ಯ ರಾಜ್ಯ ಸರ್ಕಾರ ಆದೇಶವನ್ನು ಉಲ್ಲಂಘನೆ ಮಾಡಿ ದಿನಾಂಕ: 03/06/2021 ರಂದು ಮದ್ಯಾಹ್ನ 12-00 ಗಂಟೆಯ ಸುಮಾರಿಗೆ ವಿಜಯಪೂರ ಶಹರದ ವಜ್ರಹನುಮಾನ ರೈಲ್ವೆ ಗೇಟ ಹತ್ತಿರ ತನ್ನ ಬೇಕರಿ ಅಂಗಡಿಯನ್ನು ಪ್ರಾರಂಭಿಸಿ ಅನಾವಶ್ಯಕವಾಗಿ ಜನರಿಗೆ ಸೇರಿಸಿಕೊಂಡು ಬೇಕರಿ ಸಾಮಾನುಗಳನ್ನು ವ್ಯಾಪಾರ ಮಾಡುತ್ತಿದ್ದಾಗ ಸಿಕ್ಕಿರುತ್ತಾನೆ. ಕಾರಣ ಸದರಿ ಆರೋಪಿತನ ಮೇಲೆ ಕ್ರಿಮಿನಲ್ ಮೊಕದ್ದೆಮೆ ದಾಖಲಿಸಿ ಪ್ರಥಮ ವರ್ತಮಾನದ [ಎಫ್.ಐ.ಆರ್] ಪ್ರತಿಯನ್ನು ಈ ಕಾರ್ಯಾಲಯಕ್ಕೆ ತಕ್ಷಣ ವರದಿ ಸಲ್ಲಿಸಲು ಕೋರಿದೆ. ಈ ಬಗ್ಗೆ ಸ:ತ: ಆರ್ ಎಸ್ ಜಾನರ ಪಿಎಸ್ಐ [ಕಾ&ಸು]. ಜಲನಗರ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ, ಪ್ರಕರಣವು ದಾಖಲಾಗಿರುತ್ತದೆ.